ಬೇಕಲ್ಲವೇ? ದಯಮಾಡಿ ಅಲ್ಲಿಯೇ ಮುಂದುವರಿಸಿ, ಏಕೆಂದರೆ ಸುತ್ತಮುತ್ತಲಿನ ಸುಮಾರು 15 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಿಯೂ ಕೂಡ ಕಾಲೇಜು ಇಲ್ಲ. ಇದೆಲ್ಲ ಗ್ರಾಮೀಣ ಪ್ರದೇಶವಾಗಿದ್ದು, ಇಲ್ಲಿ ಬಸ್ ಸಂಚಾರ ಕೂಡ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಇದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅಲ್ಲಿಯೇ ಮುಂದುವರಿಸುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:– ಇದಕ್ಕೆ ಅವರೇ ಉತ್ತರ ಕೊಡಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನಾಳೆ ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಸಚಿವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಅವರ ಕಡೆಯಿಂದ ಉತ್ತರ ಕೊಡಿಸುತ್ತಾರೆ.

6. ವಿಷಯ:–ತಿಪಟೂರು ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ.

ಶ್ರೀ ಕೆ. ಷಡಕ್ಷರಿ (ತಿಪಟೂರು):– ಮಾನ್ಯ ಅಧ್ಯಕ್ಷರೆ, ತಿಪಟೂರು ಕ್ಷೇತ್ರದಲ್ಲಿ ಬೈಪಾಸ್ ರಸ್ತೆ ಕಾಮಗಾರಿ ಮಾಡತಕ್ಕಂಥದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ರದ್ದು ಪಡಿಸಿದ್ದಾರೆ. ರದ್ದು ಪಡಿಸಿದ ಮೇಲೆ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮತ್ತೆ ಆ ಬೈಪಾಸ್ ರಸ್ತೆ ಕಾಮಗಾರಿಯನ್ನು ತೆಗೆದುಕೊಳ್ಳತಕ್ಕಂಥ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ? ಹಾಗೆಯೇ ಇದರ ಜೊತೆಗೆ ತುಮಕೂರು–ಶಿವಮೊಗ್ಗ ಕಾರಿಡಾರ್ ರಸ್ತೆ ನಿರ್ಮಾಣ ಮಾಡತಕ್ಕಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂಬ ಬಗ್ಗೆ ಹಾಗೂ ಆ ರಸ್ತೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಬೈಪಾಸ್ ರಸ್ತೆಯನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಹೇಳಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಓದಿ ಹೇಳಬೇಕೇ ಅಥವಾ ಹಾಗೆಯೇ ಉತ್ತರ ಹೇಳಬೇಕಾ?

ಅಧ್ಯಕ್ಷರು:– ಹಾಗೆಯೇ ಹೇಳಿ. ಉತ್ತರ ಇದ್ದರೆ ಅವರಿಗೆ ಕೊಡಿ.

ಡಾ॥ ಹೆಚ್.ಸಿ. ಮಹದೇವಪ್ಪ:– ಉತ್ತರವನ್ನು ಈಗಾಗಲೇ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ. ರಾಜ್ಯ ಹೆದ್ದಾರಿ–68 ತುಮಕೂರು – ಹೊನ್ನಾವರ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–206 ಎಂದು ಮೇಲ್ದರ್ಜೆಗೇರಿಸಿ ನವೆಂಬರ್ 1999 ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಘೋಷಿಸಿರುತ್ತದೆ. ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸುವ ಪೂರ್ವದಲ್ಲಿ ತಿಪಟೂರು ಪಟ್ಟಣಕ್ಕೆ ಬೈಪಾಸ್‌ನ್ನು ನಿರ್ಮಿಸಬೇಕೆಂದು ಯೋಜಿಸಿಕೊಂಡು ಲೋಕೋಪಯೋಗಿ ಇಲಾಖೆಯು 1992 ರಲ್ಲಿ ಭೂಸ್ವಾಧೀನ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ 3 ಹಂತದಲ್ಲಿ ಭೂಸ್ವಾಧೀನ ಪ್ರಕ್ರಿಯೇಯನ್ನು ಕೈಗೊಂಡಿರುತ್ತದೆ.

i. 63 ಎಕರೆ 27 ಗುಂಟೆ ಜಮೀನನ್ನು ದಿನಾಂಕ 08–05–1996 ರಲ್ಲಿ ಭೂಸ್ವಾಧೀನಕ್ಕೆ awardನ್ನು ಮಂಜೂರು ಮಾಡಲಾಗಿರುತ್ತದೆ.
ii. 14 ಎಕರೆ 19 ಗುಂಟೆ ಹೆಚ್ಚುವರಿ ಜಮೀನಿಗೆ ದಿನಾಂಕ 20–02–1998 ರಲ್ಲಿ awardನ್ನು ಮಂಜೂರು ಮಾಡಲಾಗಿರುತ್ತದೆ.
iii. 0 ಎಕರೆ 2 ಗುಂಟೆ ಹೆಚ್ಚುವರಿ ಜಮೀನಿಗೆ ದಿನಾಂಕ 29–02–2008 ರಲ್ಲಿ awardನ್ನು ಮಂಜೂರು ಮಾಡಲಾಗಿರುತ್ತದೆ.

ಮೇಲ್ಕಂಡ awardನಂತೆ ಭೂಮಿಯನ್ನು ಉಪ ವಿಭಾಗಾಧಿಕಾರಿಗಳು, ಉಪ ವಿಭಾಗ, ತಿಪಟೂರು, ಇವರು ಭೂಸ್ವಾಧೀನಪಡಿಸಿಕೊಂಡು ಭೂಮಾಲೀಕರಿಗೆ ಪರಿಹಾರದ ಮೊತ್ತವನ್ನು ಈಗಾಗಲೇ ವಿತರಿಸಿದ್ದಾರೆ. ತದನಂತರ, ಕೆಲವು ಭೂಮಾಲೀಕರು ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಿದ್ದು ಸರ್ವೋಚ್ಚ ನ್ಯಾಯಲಯವು ನವೆಂಬರ್

2009 ರಲ್ಲಿ ಮೇಲಿನಂತೆ 3 ಹಂತದ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಪಡಿಸಿ ಭೂಮಾಲೀಕರಿಗೆ ಹಣವನ್ನು ಹಿಂತಿರುಗಿಸುವಂತೆ ತೀರ್ಪನ್ನು ನೀಡಿರುತ್ತದೆ. ಈ ನಡುವೆ ರಾಜ್ಯ ಹೆದ್ದಾರಿ–68ನ್ನು ರಾಷ್ಟ್ರೀಯ ಹೆದ್ದಾರಿ–206 ಎಂದು ಮೇಲ್ದರ್ಜೆಗೇರಿಸಿರುವುದರಿಂದ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಈಗಾಗಲೇ ಭೂಸ್ವಾಧೀನಪಡಿಸಿಕೊಂಡಿರುವ ಭೂಮಿಯ ಅವಶ್ಯಕತೆ ಇದೆಯೇ ಅಥವಾ ಇಲ್ಲವೆ ಎಂಬುದರ ಕುರಿತು ಮತ್ತು ಅವಶ್ಯಕತೆ ಇದ್ದಲ್ಲಿ, ಹೊಸದಾಗಿ ಭೂಸ್ವಾಧೀನಕ್ಕಾಗಿ ಅಗತ್ಯ ಪ್ರಸ್ತಾವನೆಯನ್ನು ಸಲ್ಲಿಸಲು ಉಪ ವಿಭಾಗಾಧಿಕಾರಿಗಳು, ತಿಪಟೂರು, ಇವರು, ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಶೇಷ ವಿಭಾಗ, ತುಮಕೂರು, ಇವರು ಕೋರಿರುತ್ತಾರೆ. ಸದರಿ ವಿಷಯದ ಕುರಿತಂತೆ, ಉಪ ವಿಭಾಗಾಧಿಕಾರಿ, ತಿಪಟೂರು, ಇವರಿಗೆ ಘನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಪರಿಹಾರ ಮೊತ್ತವನ್ನು ಹಿಂತಿರುಗಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲು ತಿಳಿಸಿ ಹಿಂತಿರುಗಿಸಲಾದ ಹಿಡುವಳಿದಾರರ ಹೆಸರು ಮತ್ತು ಭೂಸ್ವಾಧೀನದ ವಿವರಗಳನ್ನು ಸರ್ವೆ ನಂಬರ್ ಸಹಿತ ರಾಷ್ಟ್ರೀಯ ಹೆದ್ದಾರಿಯವರಿಗೆ ಮಾಹಿತಿಯನ್ನು ಒದಗಿಸಲು ವಿನಂತಿಸಲಾಗಿದ್ದು, ಮಾಹಿತಿಯನ್ನು ನಿರೀಕ್ಷಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ–206 ಕ್ಕೆ ಕಿ.ಮೀ. 6.00 ರಿಂದ 209.00 ರವರೆಗೆ (ತುಮಕೂರು – ಶಿವಮೊಗ್ಗ) 4 ಪಥದ ರಸ್ತೆಯಾಗಿ ನಿರ್ಮಿಸುವ ಕಾಮಗಾರಿಯು NHDP IV ರಲ್ಲಿ ಸೇರ್ಪಡೆ ಹೊಂದಿರುತ್ತದೆ. ಇದಕ್ಕೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ತಾಂತ್ರಿಕ ಸಮಾಲೋಚಕರನ್ನು (consultants) ನೇಮಿಸುವ ಕುರಿತು ಟೆಂಡರ್ ಕರೆಯಲಾಗಿದೆ. ತಾಂತ್ರಿಕ ಸಲಹೆಗಾರರಿಂದ ವಿವರವಾದ ವರದಿ ಪಡೆದ ನಂತರ ಅದನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುವುದು. ಅವರಿಂದ ಅನುಮೋದನೆ ದೊರೆತ ನಂತರ ತಿಪಟೂರು ಬೈಪಾಸ್ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟವಾದ ವಿವರಗಳು ಲಭ್ಯವಾಗುತ್ತದೆ.

ಶ್ರೀ ಕೆ. ಷಡಕ್ಷರಿ:– ಮಾನ್ಯ ಅಧ್ಯಕ್ಷರೆ, ಅವಶ್ಯಕತೆ ಬಿದ್ದರೆ ನೋಡುತ್ತೇನೆಂದು ಹೇಳಿದ್ದಾರೆ. ಈಗ ತಿಪಟೂರು ಪಟ್ಟಣದ ಮಧ್ಯದಲ್ಲಿ

ಈ 206 ಕಿ.ಮೀ. ಉದ್ದದ ರಸ್ತೆ ಹೋಗುತ್ತಿರುವುದರಿಂದ ವಾಹನಗಳ ಸಂಖ್ಯೆ ಹಾಗೂ ಅಪಘಾತಗಳು ಜಾಸ್ತಿ ಆಗಿವೆ. ಈ ಕಾರಿಡರ್ ರಸ್ತೆ ಹೋಗಬೇಕಾದಂಥ ಸಂದರ್ಭದಲ್ಲಿ ಬೈಪಾಸ್ ಮುಖಾಂತರವೇ ಹೋಗಬೇಕು. ಇದಕ್ಕೆ ಈಗಾಗಲೇ land acquisition ಮಾಡಿ ಹಣವನ್ನು ಕೊಡಲಾಗಿತ್ತು. ಆದರೆ, ಯಾರೋ ಇಬ್ಬರು ಕೋರ್ಟ್‌ಗೆ ಹೋಗಿ, ಸರ್ಕಾರದ ಕಡೆಯಿಂದ ಅದಕ್ಕೆ ಸರಿಯಾದ ರೀತಿಯಲ್ಲಿ ಉತ್ತರ ಕೊಡದೆ ಅಥವಾ ದಾಖಲಾತಿಗಳನ್ನು ಒದಗಿಸದೆ ಇರುವುದರಿಂದ ಅದು ರದ್ದಾಯಿತು. ಆದ್ದರಿಂದ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಬೈಪಾಸ್ ರಸ್ತೆ ಮೂಲಕ ಹೋಗಬೇಕಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಈಗ ಶಿವಮೊಗ್ಗ ಕಾರಡಾರ್ ರಸ್ತೆ ಮಾಡುತ್ತಿದ್ದೀರಿ. ದಯಮಾಡಿ ಅರಸೀಕೆರೆ, ತಿಪಟೂರು, ಕಡೂರು ಇಲ್ಲೆಲ್ಲ ಬೈಪಾಸ್ ರಸ್ತೆ ಆಗಬೇಕು. ಇಲ್ಲದಿದ್ದರೆ ನಾವು ಅಲ್ಲಿ ವಾಸ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ದುಡ್ಡು ಎಷ್ಟೇ ಖರ್ಚಾದರು ಪರವಾಗಿಲ್ಲ. ಈ ಕೆಲಸವನ್ನು ದಯವಿಟ್ಟು ಮಾಡಲೇಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, land acquisition ಗೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಕೋರ್ಟ್‌ಗೆ ಹೋಗಿ ಸ್ಟೇ ತಂದರು. ಆನಂತರ ಕೋರ್ಟ್ ಅದನ್ನು ವಜಾ ಮಾಡಿ ಅವರಿಗೆ ಹಣ ಕೊಡಿ ವಾಪಸ್ಸು ಎಂದು ಹೇಳಿತ್ತು.

ಶ್ರೀ ಕೆ. ಷಡಕ್ಷರಿ:– ಹಣವನ್ನು ವಾಪಸ್ಸು ಏಕೆ ಕೊಡುತ್ತಿದ್ದೇವೆಂದರೆ, ಅದನ್ನು ರದ್ದು ಮಾಡಿ ಅವರಿಗೆ ಹಣವನ್ನು ವಾಪಸ್ಸು ಕೊಟ್ಟು ಪುನ: ನಿಮಗೆ ಬೇಕಾದರೆ ನಿಮ್ಮ ಇಲಾಖೆ ಅದಕ್ಕೆ ಪ್ರಸ್ತಾವನೆ ಸಲ್ಲಿಸಿದರೆ..

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, National Highway Development Authority–4ರ ಕೆಳಗಡೆ ನಾಲ್ಕು ಪಥದ ರಸ್ತೆಯಾಗಿ ಮೇಲ್ದರ್ಜೆಗೆ ಹಿಂದೆ ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರು ಕೇಂದ್ರದಲ್ಲಿ ಇದ್ದಾಗ ಮಾಡಿದ್ದರು. ತುಮಕೂರು–ಶಿವಮೊಗ್ಗದ ಕಾರಿಡಾರ್ ರಸ್ತೆ ಸುಮಾರು

206 ಕಿ.ಮೀ. ಉದ್ದದ ರಸ್ತೆಗಾಗಿ ಸರ್ವೆ ಮಾಡಿ Detailed Project Reportಗೋಸ್ಕರ consultancyಗಾಗಿ ಟೆಂಡರ್ ಅನ್ನು ಕರೆಯಲಾಗಿದೆ. ಟೆಂಡರ್ ಕರೆದಾಗ ಇವೆಲ್ಲ ಅಂದರೆ land acquisition ಅನ್ನು ಸೇರಿಸಿ ಮಾಡುತ್ತೇವೆ. ಹಾಗೆಯೇ National Highway ಬಂದಾಗ ಅದರ ಜೊತೆಗೆ ಬೈಪಾಸ್ ರಸ್ತೆ ಕೂಡ Detailed Porject Reportನಲ್ಲಿ ಸೇರಿಸುವಂತೆ consultancyಗೆ ಹೇಳಿ ಅದರ ಬಗ್ಗೆ ರಿಪೋರ್ಟ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟ ಮೇಲೆ I will get the approval.

ಶ್ರೀ ಕೆ. ಷಡಕ್ಷರಿ:– ಬೈಪಾಸ್ ರಸ್ತೆ ಎಂದರೆ, ಊರಿನ ಹೊರಗಡೆ ರಸ್ತೆ ಇರಬೇಕೆಂಬುದು ಆಗಿದೆ. ಈಗಾಗಲೇ ನಗರದಲ್ಲಿ ರಸ್ತೆ ಅಗಲೀಕರಣ..

ಅಧ್ಯಕ್ಷರು:– ಈಗ ಇರುವ ರಸ್ತೆ ಬಿಟ್ಟು ಬೈಪಾಸ್ ರಸ್ತೆ ಮಾಡಬೇಕೆಂದು ತಾವು ಹೇಳುತ್ತಿದ್ದೀರಾ?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಹೌದು. ಇಲ್ಲದಿದ್ದರೆ ಈಗಿರುವ ರಸ್ತೆಯಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ತಾವೂ ಸಹ ಅದೇ ರಸ್ತೆಯ ಮೂಲಕ ಹೋಗುತ್ತೀರಿ. ಆದ್ದರಿಂದ ಇದು ತಮಗೆ ಗೊತ್ತಾಗುತ್ತದಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ Detailed Project Report ಮಾಡುವುದಕ್ಕೆ consultancyಗೆ ಟೆಂಡರ್ ಕೊಡುವುದಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಆದ್ದರಿಂದ, Detailed Project Report ಮಾಡುವಾಗ ಬೈಪಾಸ್ ರಸ್ತೆ ಮಾಡುವುದಕ್ಕೂ ಸಹ ಆ ಪ್ರಾಜೆಕ್ಟ್‌ನಲ್ಲಿ ಸೇರಿಸುತ್ತೇವೆ. ಹಾಗೆಯೇ ಅದರಲ್ಲಿ ಅರಸೀಕೆರೆ ಸಹ ಸೇರಿಸುತ್ತೇವೆ. Consultancyರವರು ರಿಪೋರ್ಟ್ ಕೊಟ್ಟಮೇಲೆ we will recommend to the Government.

ಅಧ್ಯಕ್ಷರು:– OK.